O.S.64/2013 Further Cross of PW 1

ದಿನಾಂಕ 30-01-2026 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**<u>ಮುಂದುವರೆದ ಪಾಟೀ ಸವಾಲು :</u>** ಪ್ರತಿವಾದಿಗಳ ಪರ ಶ್ರೀ ಎ ಬಿ ಜೆ ವಕೀಲರಿಂದ.

ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳನ್ನು ನೋಡಿಕೊಂಡಿದ್ದೇನೆ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಪುಟ ಸಂಖ್ಯೆ 2 ಖಂಡಿಕೆ 5 ರ ಮೊದಲನೇ 18 ಸಾಲುಗಳನ್ನು ವಾದ ಪತ್ರದಲ್ಲಿ ನಮೂದಿಸಿರುತ್ತೀರಾ ಎಂದು ಅದನ್ನು ಓದಿ ವಾದ ಪತ್ರದಲ್ಲಿ ನಮೂದಿಸಿರುತ್ತೇನೆ ಎನ್ನುತ್ತಾರೆ. ವಾದ ಪತ್ರದ ಯಾವ ಖಂಡಿಕೆಯಲ್ಲಿ ಸದರಿ ವಿಷಯವನ್ನು ನಮೂದಿಸಿರುತ್ತೀರಿ ಎಂದರೆ ಸಾಕ್ಷಿ ವಾದ ಪತ್ರವನ್ನು ನೋಡಿ ವಾದ ಪತ್ರದಲ್ಲಿ ನಮೂದು ಇಲ್ಲ ಎನ್ನುತ್ತಾರೆ. ಖಂಡಿಕೆ 5 ರಲ್ಲಿನ ವಿಷಯಗಳನ್ನು ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೊಸದಾಗಿ ಸೇರಿಸಿರುತ್ತೀರಿ ಎಂದರೆ ಸರಿ. ದಾವಾಗೆ ಅನುಕೂಲವಾಗುವಂತೆ ನಿಮ್ಮ ವಾದವನ್ನು ಬದಲಾಯಿಸುತ್ತಾ ಬಂದಿರುತ್ತೀರಿ ಎಂದರೆ ಸರಿಯಲ್ಲ. ನೀವು ಹೂಡಿದ ದಾವೆ ಸುಳ್ಳಿನಿಂದ ಕೂಡಿದ್ದರಿಂದ ಕಾಲ ಕಾಲಕ್ಕೆ ಹೊಸ ವಿಷಯಗಳನ್ನು ಸೃಷ್ಟಿಸಿದ್ದೀರಿ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಪುಟ ಸಂಖ್ಯೆ 2 ಖಂಡಿಕೆ 5 ರ ಮೊದಲನೇ 18 ಸಾಲುಗಳು ನಿಜವಾಗಿದ್ದರೆ ವಾದ ಪತ್ರದಲ್ಲಿ ನಮೂದಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಪುಟ ಸಂಖ್ಯೆ 2 ಖಂಡಿಕೆ 5 ರ ಮೊದಲನೇ 18 ಸಾಲುಗಳು ಸುಳ್ಳಿನಿಂದ ಕೂಡಿದ್ದರಿಂದ ಬರೆಸಿಲ್ಲ ಎಂದರೆ ಸರಿಯಲ್ಲ. ಯಾವುದೇ ವಿಷಯ ಮನಿಸ್ಸಿಗೆ ಬೇಡವಾಗಿದ್ದರೆ ಮಾಡುವುದಿಲ್ಲ ಎಂದರೆ ಸರಿ. ಯಾವುದೇ ವಿಷಯ ಮನಿಸ್ಸಿಗೆ ಸರಿ ಅನಿಸಿದ್ದರೆ ಮಾತ್ರ ಮಾಡುತ್ತೀರಿ ಎಂದರೆ ಸರಿ. ನಿಪಿ 2 ಅನ್ನು ನೀವೆ ಸ್ವತಃ ಬರೆದುಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ನಿಮಗೆ ಕ್ರಯ ಪತ್ರದ ವಿಷಯಗಳನ್ನು ತಿಳಿಸಿ ನೋಂದಣಿ ಮಾಡಿಸಿರುತ್ತಾರೆ ಎಂದರೆ ಸಾಕ್ಷಿ ನನ್ನನ್ನು ಉಪ ನೋಂದಣಾಧಿಕಾರಿಗಳ ಕಚೇರಿಗೆ

05–00 ಗಂಟೆಗೆ ಕರೆದುಕೊಂಡು ಹೋಗಿ ಇಲ್ಲಿ ಸಹಿ ಮಾಡು ಕುಳಿತುಕೊ ಎಂದು ಹೇಳಿದರು ಸ್ವತಃ ನನ್ನ ಅಕ್ಕನಾಗಿದ್ದರಿಂದ ನಾನು ಸಹಿ ಮಾಡಿದೆ ಎನ್ನುತ್ತಾರೆ. ಈ ರೀತಿಯಾಗಿ ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಕ್ರಯ ಪತ್ರ ಬರೆದುಕೊಡಲು ಒತ್ತಾಯ ಮಾಡಿದ್ದಾರೆ ಎಂದು ನಿಮಗೆ ಗೊತ್ತಿದ್ದರೆ ಸದರಿ ವಿಷಯವನ್ನು ಉಪ ನೋಂದಣಾಧಿಕಾರಿಗಳಿಗೆ ತಿಳಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಹೇಳಲು ಸಮಯಾವಕಾಶ ನೀಡಲಿಲ್ಲ ಎನ್ನುತ್ತಾರೆ. ಹೇಳಲು ಸಮಯಾವಕಾಶ ನೀಡಲಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಕ್ರಯ ಪತ್ರವಾದ ನಂತರ ನಿರ್ದಿಷ್ಟ ಕಾಲಾವದಿ ಮುಗಿದ ನಂತರ ಪ್ರತಿವಾದಿಯ ಹೆಸರು ದಾವಾ ಸ್ವತ್ತಿಗೆ ನಮೂದಾಯಿತು ಎಂದರೆ ಸರಿ. ಸಾಕ್ಷಿ ಒಪ್ಪಿದ ಮೇರೆಗೆ ಸದರಿ ಸಿ ಟಿ ಎಸ್ ಉತಾರವನ್ನು **ನಿಡಿ 1 ಎಂದು** ಗುರುತಿಸಲಾಯಿತು. ಕ್ರಯ ಪತ್ರವಾದ 45 ದಿನಗಳ ಒಳಗಾಗಿ ನೀವು ಯಾವುದೇ ತಕರಾರು ಕೊಟ್ಟಿಲ್ಲ ಎಂದರೆ ಸರಿ. ನೀವು 2 ಲಕ್ಷ 75 ಸಾವಿರ ರೂಪಾಯಿಗಳನ್ನು ಪಡೆದು ಕ್ರಯ ಪತ್ರವನ್ನು ಬರೆದುಕೊಟ್ಟ ಕಾರಣ ನೀವು ತಕರಾರು ನೀಡಲಿಲ್ಲ ಎಂದರೆ ಸರಿಯಲ್ಲ. ಸಾರ್ವಜನಿಕ ನೋಟೀಸ ಕೊಟ್ಟ ನಂತರ ಯಾವುದೇ ತಕರಾರು ಬರದ ಕಾರಣ ಪ್ರತಿವಾದಿಯ ಹೆಸರನ್ನು ದಾವಾ ಆಸ್ತಿಗೆ ನಮೂದಿಸಲಾಯಿತು ಎಂದರೆ ಸರಿ. ನಂತರ ಪ್ರತಿವಾದಿಯ ಹೆಸರು ಆಸ್ತಿ ತೆರಿಗೆ ರಜಿಸ್ಟರ್ ನಲ್ಲಿ ನಮೂದಾಗಿದೆ ಎಂದರೆ ಸರಿ. ಸಾಕ್ಷಿಗೆ ಮೂರು ತೆರಿಗೆ ಪಾವತಿ ರಸೀದಿಗಳನ್ನು ತೋರಿಸಿ ಪ್ರತಿವಾದಿ ದಾವಾ ಸ್ವತ್ತಿನ ತೆರಿಗೆಯನ್ನು ತುಂಬುತ್ತಿದ್ದಾರೆ ಎಂದರೆ ಸರಿ. ಸಾಕ್ಷಿಗೆ ಒಪ್ಪಿದ ಮೇರೆಗೆ ಮೂರು ತೆರಿಗೆ ಪಾವತಿಗಳನ್ನು ಒಟ್ಟಾರೆಯಾಗಿ **ನಿಡಿ 2 ಎಂದು** ಗುರುತಿಸಲಾಯಿತು. ದಾವಾ ಆಸ್ತಿಗೆ ಪ್ರತಿವಾದಿ ವಿದ್ಯುತ ಸಂಪರ್ಕ ಪಡೆಯಲು ಪಟ್ಟಣ ಪಂಚಾಯತಿ ಹಳಿಯಾಳ ರವರು ನಿರಕ್ಷೇಪಣಾ ಪತ್ರವನ್ನು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಸ್ವತ್ತಿನ ಎಲ್ಲಾ ದಾಖಲೆಗಳು ಪ್ರಸ್ತುತ ಪ್ರತಿವಾದಿಯ ಹೆಸರಿನಲ್ಲಿ ಇವೆ ಎಂದರೆ ಸರಿ. ಈ ದಾವೆಯನ್ನು ಹೂಡುವ ವರೆಗೂ ಯಾವುದೇ ಸಂಬಂಧಪಟ್ಟ ಇಲಾಖೆಗೂ ತಕರಾರು ಕೊಟ್ಟಿಲ್ಲ ಎಂದರೆ ಸರಿ. ನಿಮಗೆ ಖರೀದಿ ಹಣ ಮುಟ್ಟದಿದ್ದರೆ ತಕರಾರು ಸಲ್ಲಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಖರೀದಿ ಹಣ

ಪಡೆದು ಕಾನೂನು ಬದ್ದವಾಗಿ ಕ್ರಯ ಪತ್ರ ಬರೆದುಕೊಟ್ಟಿದ್ದರಿಂದ ತಕರಾರು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ವಾದಿರಾಜ್ ಮದುಸುದನ್ ಮನ್ನಾರಿರವರು ಹಾಜರಿದ್ದರು ಎಂದು ವಾದ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ವಾದಿರಾಜ್ ಮದುಸುದನ್ ಮನ್ನಾರಿ ರವರ ಪ್ರಕರಣ ಆಗ ಚಾಲ್ತಿಯಲ್ಲಿ ಇತ್ತು ಎನ್ನುತ್ತಾರೆ. ನಿಮ್ಮ ಮೇಲೆ ಒತ್ತಾಯ ಇದ್ದರೆ ನಿಮ್ಮ ಗಂಡ ಬರುವವರೆಗೂ ಕಾಯಬಹುದಿತ್ತು ಎಂದರೆ ಸಾಕ್ಷಿ ನನ್ನ ಗಂಡನಿಗೆ ಸದರಿ ವಿಷಯವನ್ನು ತಿಳಿಸಿಲ್ಲ ಎನ್ನುತ್ತಾರೆ.

ನಿಮ್ಮ ನೊಟೀಸ್ ಗೆ ಪ್ರತಿವಾದಿ ಕೂಡಲೆ ನಾನು ಹಣ ಕೊಟ್ಟಿದ್ದೇನೆ ಎಂದು ಮರುಉತ್ತರ ನೀಡಿದ್ದಾರೆ ಎಂದರೆ ಸರಿಯಲ್ಲ. ಈ ರೀತಿಯಾಗಿ ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹ ಪ್ರತಿವಾದಿಯರಿಂದ ಹೆಚ್ಚು ಹಣ ಪಡೆಯಬೇಕು ಮತ್ತು ಅವರಿಗೆ ಮೋಸ ಮಾಡಬೇಕು ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ 25 ಮತ್ತು 26 ಅನ್ನು ಈ ದಾವೆಗೆ ಸಂಬಂಧಿಸಿದ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ. ನಿಪಿ 27 ರಿಂದ 29 ರಲ್ಲಿ ಪ್ರಸ್ತುತ ಪ್ರತಿವಾದಿಯ ಹೆಸರು ನಮೂದಾಗಿದೆ ಎಂದರೆ ಸರಿ. ಪ್ರತಿವಾದಿ 2 ಲಕ್ಷ 75 ಸಾವಿರ ರೂ. ಗಳನ್ನು ತಮಗೆ ಸಾಕ್ಷಿದಾರರ ಸಮಕ್ಷಮ ಕೊಟ್ಟು ದಾವಾ ಸ್ವತ್ತನ್ನು ಸಾಕ್ಷಿದಾರರ ಸಮಕ್ಷಮ ಖರೀದಿಸಿದ್ದರೂ ಸಹ ಅವರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಯಾವುದೇ ಪರಿಹಾರಕ್ಕೆ ಭಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ನೀವು ದಾವಾ ಸ್ವತ್ತಿನ ಕುರಿತು ಯಾವುದೇ ದೂರು ನೀಡಿಲ್ಲ ಎಂದರೆ ಸರಿ. ಪ್ರತಿವಾದಿಯಿಂದ 2 ಲಕ್ಷ 75 ಸಾವಿರ ರೂ. ಗಳನ್ನು ಪಡೆದ ಕಾರಣ ದೂರು ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೌಲ್ಯ ಹೆಚ್ಚಾಗಿದ್ದರಿಂದ ಪ್ರತಿವಾದಿಯರಿಂದ ಹೆಚ್ಚು ಹಣ ಪಡೆಯಬೇಕು ಎಂಬ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

O.S.64/2013 Further Cross of PW 1

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.